# ಮರೆಯಲಾಗದ ಕಿರಗೂರು

ಇತ್ತೀಚಿನ ಮಹಿಳಾಪ್ರಧಾನ ಚಿತ್ರಗಳಲ್ಲಿ ಪ್ರಮುಖವಾಗಿ ಗುರ್ತಿಸಬೇಕಾದ ಪ್ರಯೋಗ 'ಕಿರಗೂರಿನ ಗಯ್ಯಾಳಿಗಳು'. ಸಾಹಿತ್ಯಕೃತಿಗಳ ಸಹವಾಸಕ್ಕೆ ಕನ್ನಡ ಚಿತ್ರೋದ್ಯಮ ಬೆನ್ನು ಹಾಕಿರುವ ಸಂದರ್ಭದಲ್ಲಿ, ಪೂರ್ಣಚಂದ್ರ ತೇಜಸ್ವಿ ಅವರ ಕಥೆಯನ್ನು ಆಧರಿಸಿದ ಈ ಸಿನಿಮಾ, ಇತ್ತೀಚಿನ ಚಿತ್ರಗಳಲ್ಲಿ ವಿಶೇಷ ಪ್ರಯತ್ನ ಮಾತ್ರವಲ್ಲ – ಎಂಬತ್ತು ವರ್ಷಗಳ ಕನ್ನಡ ಸಿನಿಮಾ ಚರಿತ್ರೆಯಲ್ಲೇ ಒಂದು ವಿಶಿಷ್ಟ ಸಿನಿಮಾ. ತೇಜಸ್ವಿ ಅವರ ಕಥನದ ಆಶಯವನ್ನು ವಿಸ್ತರಿಸಿರುವ ನಿರ್ದೇಶಕಿ ಸುಮನ್, ಕಿರಗೂರಿನ ಹೆಣ್ಣುಮಕ್ಕಳ ಮೂಲಕ ಗ್ರಾಮೀಣ ಭಾರತದ ಹೆಣ್ಣುಮಕ್ಕಳ ದಿಟ್ಟತನವನ್ನೂ ಅಂತಃಕರಣವನ್ನೂ ಹಿಡಿದಿಡಲು ಪ್ರಯತ್ನಿಸಿದ್ದಾರೆ. ಪುರುಷರ ಚಪಲಗಳು ಹಾಗೂ ಬೇಜವಾಬ್ದಾರಿಯ ಜೊತೆಗೆ ಕುಟುಂಬವನ್ನು ಕಟ್ಟಿಕೊಳ್ಳಲು ಹೆಣ್ಣುಮಕ್ಕಳು ಪಡುವ ಪಡಿಪಾಟಲುಗಳನ್ನು ಕೊಂಚ ನಾಟಕೀಯವಾಗಿ ಹಾಗೂ ರಮ್ಯವಾಗಿ ಸಿನಿಮಾ ಕಟ್ಟಿಕೊಡುತ್ತದೆ. ಹಳ್ಳಿಗಳಲ್ಲಿನ ಮೌಢ್ಯ, ಜಾತೀಯತೆಯ ಸ್ವರೂಪವನ್ನೂ ಕಾಣಿಸಲು ಪ್ರಯತ್ನಿಸುವ ಸಿನಿಮಾ, ಸಮಾಜದ ಬದಲಾವಣೆಯ ನಿಟ್ಟಿನಲ್ಲಿ ಸ್ತ್ರೀಶಕ್ತಿಯ ಮಹತ್ವವನ್ನು ಎತ್ತಿಹಿಡಿಯುತ್ತದೆ.

'ಕಿರಗೂರಿನ ಗಯ್ಯಾಳಿಗಳು' ಸಿನಿಮಾದ ಮತ್ತೊಂದು ವಿಶೇಷ, ಆ ಚಿತ್ರದಲ್ಲಿನ ತಾರಾಗಣ. ಶ್ವೇತಾ ಶ್ರೀವಾತ್ಸವ್, ಸುಕೃತಾ ವಾಗ್ಲೆ, ಮಾನಸಾ ಜೋಶಿ, ಸೋನು, ಕಾರುಣ್ಯ ರಾಮ್‌ರಂಥ ಹೊಸಪೀಳಿಗೆಯ ನಟಿಯರ ಜೊತೆಗೆ, ಬಿ. ಜಯಶ್ರೀ, ಲಕ್ಷ್ಮೀ ಚಂದ್ರಶೇಖರ್, ಗಿರಿಜಾ ಲೋಕೇಶ್‌ರಂಥ ಹಿರಿಯ ಅಭಿನೇತ್ರಿಯರು ನಟಿಸಿರುವ ಸಿನಿಮಾಕ್ಕೊಂದು ವಿಶೇಷ ಜೀವಂತಿಕೆಯನ್ನು ನೀಡಿದೆ.



ಪವಿತ್ರ ಲೋಕೇಶ್, ಜಯಮಾಲಾ, ತಾರಾ, ಉಮಾಶ್ರೀ ಜೊತೆ ಗಿರೀಶ್ ಕಾಸರವಳ್ಳಿ

ಕನ್ನಡ ಚಿತ್ರಗಳಲ್ಲಿ 'ಸ್ತ್ರೀಲೋಕ' ವ್ಯಾಪಕವಾಗಿ ತೆರೆದುಕೊಳ್ಳುವ ಅವಕಾಶ ಸಾಕಷ್ಟಿದೆ ಎಂದು ವಿಶ್ವನಾಥ್ ಅವರಿಗನ್ನಿಸಿದೆ. ಶ್ರುತಿ ಅವರಂಥ ಹಿರಿಯ ಕಲಾವಿದೆಯನ್ನು ಬಳಸಿಕೊಂಡು 40–45 ವಯಸ್ಸಿನ ಹೆಣ್ಣುಮಕ್ಕಳ ತವಕ– ತಲ್ಲಣಗಳನ್ನು ಲಘುಧಾಟಿಯಲ್ಲಿ ಕಟ್ಟಿಕೊಡುವ ಸಿನಿಮಾಗಳ ಅಗತ್ಯವನ್ನು ಅವರು ಸೂಚಿಸುತ್ತಾರೆ.

ಆಗಬೇಕಿರುವ ಹೊಸ ಪ್ರಯತ್ನಗಳ ಬಗ್ಗೆ ನಿರ್ದೇಶಕಿ ಸುಮನ್ ಕಿತ್ತೂರು ಗಮನಸೆಳೆಯುತ್ತಾರೆ. 'ಕನ್ನಡ ಚಿತ್ರರಂಗದಲ್ಲಿ ಕಾಣಿಸುತ್ತಿರುವ ಬದಲಾವಣೆ ಹೊಸ ಮನಸುಗಳ ಆಗಮನವನ್ನು ಸೂಚಿಸುವಂತಿದೆ. ಆದರೆ, ಈ ಮುಖಗಳನ್ನು ನಾನು ಮತ್ತೊಮ್ಮೆ ನೋಡಬಯಸುವೆ. ಆಗ ಅವರ ಗಟ್ಟಿತನದ ಅಸಲಿಯತ್ತು ಸ್ಪಷ್ಟವಾಗುತ್ತದೆ. ಮಲಯಾಳಂನಲ್ಲಿ ಇಂಥ ಬದಲಾವಣೆಗಳು ಕಾಣಿಸಿಕೊಂಡಾಗ, ಆ ಟ್ರೆಂಡ್ ಮುಂದುವರಿಸುವ ಪ್ರಜ್ಞಾಪೂರ್ವಕ ಪ್ರಯತ್ನಗಳು ನಡೆಯುತ್ತವೆ. ನಮ್ಮಲ್ಲಿ ಅಂಥ ಪ್ರಯತ್ನಗಳಿಗೆ ಪ್ರೋತ್ಸಾಹ ಕಡಿಮೆ. ಸಿದ್ಧಸೂತ್ರಗಳಿಗೆ ಇಲ್ಲಿ ಹೆಚ್ಚು ಮರ್ಯಾದೆ' ಎಂದು ಸುಮನ್ ಮಾರ್ಮಿಕವಾಗಿ ಹೇಳುತ್ತಾರೆ.

ಅಂದಹಾಗೆ, ಗಾಂಧಿನಗರದ ನಿರ್ಮಾತೃಗಳಿಗೆ ಇದ್ದಕ್ಕಿದ್ದಂತೆ ಮಹಿಳಾಕಥನಗಳತ್ತ ಪ್ರೀತಿ ಮೂಡಿದ್ದು




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

